**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಬಸವನ-ಬಾಗೇವಾಡಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 611/2023.**

**ಡಿ.ಡಬ್ಲ್ಯು -2**

**ಸಾಕ್ಷಿಗೆ ದಿನಾಂಕ 07.08.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಃ ಲಾಲು ಲಮಾಣಿ |
| ತಂದೆಯ ಹೆಸರು | ಃ ಸುಬ್ಬು |
| ವಯಸ್ಸು | ಃ 40 ವರ್ಷ |
| ಉದ್ಯೋಗ | ಃ ವ್ಯವಸಾಯ |
| ವಾಸಸ್ಥಳ | ಃ ಮಣ್ಣೂರು ತಾಂಡ |

**ಮುಖ್ಯವಿಚಾರಣೆ ಶ್ರೀ.ಎ.ಜ್.ಎನ್ ವಕೀಲರಿಂದಃ-**

1. ಆರೋಪಿ ಹಾಗೂ ಪಿರ್ಯಾದಿಯ ಪರಿಚಯ ಇರುತ್ತದೆ. ಪಿರ್ಯಾದಿದಾರರಾದ ರಾಮು, ಉಮಲು ಮತ್ತು ರಮೇಶ ಆರೋಪಿಯ ಮನೆಗೆ ಹೋಗಿ ಬಂದು ಮಾಡುತ್ತಿದ್ದನು. ಆರೋಪಿ ಬಂದು ನನಗೆ ಮತ್ತು ಹಿರಿಯರಿಗೆ ಚಕ್ ಕಳಿದುಹೋಗಿರುತ್ತದೆ ಎಂದು ರಾಮು, ಉಮಲು ಮತ್ತು ರಮೇಶ ರವರ ಮೇಲೆ ಸಂಶಯ ಇರುತ್ತದೆ ಎಂದು ತಿಳಿಸಿರುತ್ತಾನೆ. ನಂತರ ರಾಮು, ಉಮಲು ಮತ್ತು ರಮೇಶ ರವರೆ ಚಕ್ಕುಗಳನ್ನು ತಗೆದುಕೊಂಡು ಹೋಗಿರುತ್ತಾರೆ ಎಂದು ಗೊತ್ತಾಗಿರುತ್ತದೆ. ಹಿರಿಯರನ್ನು ಕೂಡಿಸಿ ಶಿವಾಲಯ ದೇವಸ್ಥಾನಲ್ಲಿ ಕುಳಿತುಕೊಂಡಿದ್ದಾಗ ರಾಮು, ಉಮಲು ಮತ್ತು ರಮೇಶ ರವರು ಚಕ್ಕುಗಳನ್ನು ಹಿಂದುರುಗಿಸುತ್ತೇವೆ ಎಂದು ಒಪ್ಪಿಗೊಂಡಿರುತ್ತಾರೆ. ನಂತರ 15 ದಿಸ ಕಾದು ನೋಡಿದ ನಂತರ ಆರೋಪಿಯು ದೂರನ್ನು ಸಲ್ಲಿಸುತ್ತೇನೆ ಎಂದು ಹೇಳಿದಾಗ ಸದರಿಯವರು ಕೊಡುತ್ತೇನೆ ಎಂದು ಹೇಳಿದರು. ನಂತರ ಸದರಿಯವರು ಆರೋಪಿಗೆ ನೋಟಿಸುವ ಕಳುಹಿಸಿರುತ್ತಾರೆ. ಸದರಿ ಚಕ್ಕುಗಳ ಮೇಲೆ ಆರೋಪಿ ಸಹಿ ಮಾತ್ರ ಮಾಡಿರುತ್ತಾನೆ. ಯಾವುದೇ ಹಣ ನಮೂದು ಮಾಡಿರುವುದಿಲ್ಲ. ಆರೋಪಿ ಹಾಗೂ ಪಿರ್ಯಾದಿಯ ನಡುವೆ ಹಣದ ವ್ಯವಹಾರ ಇರುವುದಿಲ್ಲ.

ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

(ಶ್ರೀ. ಅಮೀತ್ ಘಟ್ಟಿ )

ದಿವಾಣಿ ನ್ಯಾಯಾಧೀಶರು ಮತ್ತು

ನ್ಯಾಯಿಕ ದಂಡಾಧಿಕಾರಿಗಳು

ಬಸವನ ಬಾಗೇವಾಡಿ.